ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಓದಿದೆ:** ನಿಗಮದ ಆದೇಶ ಸಂಖ್ಯೆ; ಕವಿಪ್ರನಿನಿ/ಬಿ5/259/1998-99 ದಿನಾಂಕ; 11.02.2022.

**ಪೀಠಿಕೆ:** ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ಬೆಂಗಳೂರು ರವರ ಕಛೇರಿಯಲ್ಲಿ 2 ಲೆಕ್ಕ ನಿಯಂತ್ರಣಾಧಿಕಾರಿ ಹುದ್ದೆಗಳಿದ್ದು, ಲೆಕ್ಕ ನಿಯಂತ್ರಣಾಧಿಕಾರಿ (ಎಸ್‌ಎಲ್‌ಡಿಸಿ) ರವರು ಲೆಕ್ಕ ಮತ್ತು ಸಿಬ್ಬಂದಿಯ ವಿಷಯಗಳನ್ನು ಮತ್ತು ಲೆಕ್ಕ ನಿಯಂತ್ರಣಾಧಿಕಾರಿ(ಟಿಬಿಸಿ) ರವರು ಟ್ರಾನ್ಸ್‌ಮಿಷನ್ ಬಿಲ್ಲಿಂಗ್ ಕೇಂದ್ರ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ರಾಜ್ಯ ವಿದ್ಯುತ್ ರವಾನೆ ಕೇಂದ್ರಕ್ಕೆ ಆರ್ಥಿಕ ಸಲಹೆಗಾರರು ಹುದ್ದೆಯ ಅಧಿಕಾರಿಯ ಅವಶ್ಯಕತೆಯಿರುವುದನ್ನು ಮನಗಂಡು, ನಿಗಮದ ಆದೇಶ ಸಂಖ್ಯೆ; ಕವಿಪ್ರನಿನಿ/ಬಿ5/259/1998-99 ದಿನಾಂಕ; 11.02.2022 ರಲ್ಲಿ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಲೆಕ್ಕ ನಿಯಂತ್ರಣಾಧಿಕಾರಿ (ಎಸ್‌ಎಲ್‌ಡಿಸಿ) ಹುದ್ದೆಯನ್ನು ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ಹುದ್ದೆಗೆ ಉನ್ನತೀಕರಿಸಿರುವುದರಿಂದ, ಸದರಿ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಸೂಚಿಸಬೇಕಿರುತ್ತದೆ ಮತ್ತು ಲೆಕ್ಕ ನಿಯಂತ್ರಣಾಧಿಕಾರಿ(ಟಿಬಿಸಿ) ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪುನ: ವ್ಯಾಖ್ಯಾನಿಸಬೇಕಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

**ನಿಗಮ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ5ಎ/259/1998-99**

**ಬೆಂಗಳೂರು, ದಿನಾಂಕ:** 15 MAR 2022

ನಿಗಮವು ಈ ಕೆಳಕಂಡ ವಿಷಯಗಳಿಗೆ ಅನುಮೋದನೆಯನ್ನು ನೀಡಿದೆ:

1. ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ಬೆಂಗಳೂರು ರವರು ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರಿಗೆ ವರದಿ ಮಾಡಲು ಸೂಚಿಸಿದೆ.
2. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ, ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರು ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ ರವರೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಲು ಸೂಚಿಸಿದೆ.
3. ಲೆಕ್ಕ ನಿಯಂತ್ರಣಾಧಿಕಾರಿ(ಟಿಬಿಸಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ಬೆಂಗಳೂರು ಹುದ್ದೆಯ ಹೆಸರನ್ನು **'ಲೆಕ್ಕ ನಿಯಂತ್ರಣಾಧಿಕಾರಿ(ಎಸ್‌ಎಲ್‌ಡಿಸಿ)'** ಎಂದು ಮರು ಹೆಸರಿಸಿದೆ.
4. ಲೆಕ್ಕ ನಿಯಂತ್ರಣಾಧಿಕಾರಿ(ಎಸ್‌ಎಲ್‌ಡಿಸಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ಬೆಂಗಳೂರು ರವರು ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರಿಗೆ ವರದಿ ಮಾಡಲು ಸೂಚಿಸಿದೆ ಮತ್ತು ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ, ಅಧೀಕ್ಷಕ ಇಂಜಿನಿಯರ್(ವಿ)(ಟಿಬಿಸಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ ರವರೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಲು ಸೂಚಿಸಿದೆ.
5. ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರು ಮತ್ತು ಲೆಕ್ಕ ನಿಯಂತ್ರಣಾಧಿಕಾರಿ(ಎಸ್‌ಎಲ್‌ಡಿಸಿ) ರವರು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧಗಳಲ್ಲಿ ತಿಳಿಸಿದೆ.

ಆದೇಶದ ಮೇರೆಗೆ,

'ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ'

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

**ಪ್ರತಿಗಳು:**
1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.

2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ ನಿರ್ದೇಶಕರು (ಹಣಕಾಸು), ಬೆವಿಸಕಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.) ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ. /ಪ. ಪಂ.ಅಧಿಕಾರಿಗಳ ಸಂಘ, ಬೆಂಗಳೂರು.

**ನಿಗಮ ಆದೇಶ ಸಂಖ್ಯೆ. ಕವಿಪ್ರನಿನಿ/ಬಿಸಿಎ/259/1998-99 ದಿನಾಂಕ: 15 MAR 2023 ಅನುಬಂಧ**

## 1. ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರಿಗೆ ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳು:

1. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಎಲ್ಲಾ ಆರ್ಥಿಕ ಮತ್ತು ಲೆಕ್ಕ ವಿಷಯಗಳಲ್ಲಿ ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ ರವರಿಗೆ ಸಲಹೆಗಳನ್ನು ನೀಡುವುದು.
2. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಆರ್ಥಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ಎಸ್.ಆರ್.ಪಿ.ಸಿ. ಸಭೆಗಳಲ್ಲಿ ಕವಿಪ್ರನಿನಿ/ ರಾಜ್ಯ ವಿದ್ಯುತ್ ರವಾನೆ ಕೇಂದ್ರವನ್ನು ಪ್ರತಿನಿಧಿಸುವುದು ಮತ್ತು ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರಿಗೆ ವರದಿಯನ್ನು ಸಲ್ಲಿಸುವುದು.
3. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಜಾರಿಗೊಳಸುವ ನಿಯಮಾವಳಿಗಳನ್ನು ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ ರವರೊಂದಿಗೆ ಪರಿಶೀಲಿಸುವುದು ಮತ್ತು ಯಾವುದಾದರೂ ತಿದ್ದುಪಡಿಗಳ ಅಗತ್ಯತೆಯಿದ್ದಲ್ಲಿ, ವಿಷಯದಲ್ಲಿ ಮುಂದಿನ ಕ್ರಮಕ್ಕಾಗಿ ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರಿಗೆ ಪ್ರಸ್ತಾವನೆಯನ್ನು ನೀಡುವುದು.
4. ಅಂತರ ರಾಜ್ಯ ಮತ್ತು ರಾಜ್ಯದೊಳಗಿನ ಪ್ರಸರಣಾ ಶುಲ್ಕಗಳ/ಡಿಎಸ್‌ಎಂ ಶುಲ್ಕಗಳ ಬಿಲ್ಲಿಂಗ್ ಗಳಲ್ಲಿ ಅನುಸರಿಸುತ್ತಿರುವ ಪದ್ಧತಿಗಳನ್ನು ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ ರವರೊಂದಿಗೆ ಜಂಟಿಯಾಗಿ ಪರಿಶೀಲಿಸುವುದು ಮತ್ತು ಶುಲ್ಕಗಳ ಬಿಲ್ಲಿಂಗ್ ಗಳಲ್ಲಿ ಅನುಸರಿಸುತ್ತಿರುವ ಪದ್ಧತಿಗಳಿಗೆ ಯಾವುದಾದರೂ ಮಾರ್ಪಾಡುಗಳ/ಬದಲಾವಣೆಗಳ ಅಗತ್ಯತೆಯಿದ್ದಲ್ಲಿ, ವಿಷಯದಲ್ಲಿ ಮುಂದಿನ ಕ್ರಮಕ್ಕಾಗಿ ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರಿಗೆ ಸಲಹೆಯನ್ನು/ಪ್ರಸ್ತಾವನೆಯನ್ನು ನೀಡುವುದು.
5. ರಾಜ್ಯ ವಿದ್ಯುತ್ ರವಾನೆ ಕೇಂದ್ರವು ನೇರವಾಗಿ ನಿರ್ವಹಿಸುತ್ತಿರುವ ನಿಯಂತ್ರಣ ವ್ಯವಹಾರಗಳ ಕಾನೂನಾತ್ಮಕ ಪ್ರಕರಣಗಳನ್ನು ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ ರವರೊಂದಿಗೆ ಪರಿಶೀಲಿಸುವುದು ಮತ್ತು ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರಿಗೆ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು ಹಾಗೂ ಆರ್ಥಿಕ ಸಲಹೆಗಾರರು(ನಿಯಂತ್ರಣ ವ್ಯವಹಾರಗಳು), ಕವಿಪ್ರನಿನಿ ರವರಿಗೆ ವರದಿಯ ಪ್ರತಿಯನ್ನು ಕಳುಹಿಸುವುದು.
6. ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳು ಕಾಲಕಾಲಕ್ಕೆ ಜಾರಿಗೊಳಸುವ ಆದೇಶಗಳಂತೆ ಪ್ರಸರಣ ಶುಲ್ಕಗಳ/ ಓಪನ್ ಆಕ್ಸೆಸ್ ಶುಲ್ಕಗಳ/ಎಸ್‌ಎಲ್‌ಡಿಸಿ ಶುಲ್ಕಗಳ ಮತ್ತು ರಿಯಾಕ್ಟಿವ್ ಎನರ್ಜಿ ಶುಲ್ಕಗಳ ಬಿಲ್ಲಿಂಗ್ ಮತ್ತು ಸಂಗ್ರಹಣೆಯ ವಿಷಯಗಳಲ್ಲಿ ಉಸ್ತುವಾರಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂತರ ರಾಜ್ಯ ಹಾಗೂ ರಾಜ್ಯದೊಳಗಿನ ಸಂಸ್ಥೆಗಳಿಗೆ ಪ್ರಸರಣಾ ಶುಲ್ಕಗಳನ್ನು ಮರು ಪಾವತಿ ಮಾಡುವ ವಿಷಯಗಳಲ್ಲಿ ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರ ಅನುಮೋದನೆಯನ್ನು ಪಡೆಯುವುದು.
7. ಡಿಎಸ್‌ಎಂ ಶುಲ್ಕಗಳಿಗೆ ಸಂಬಂಧಿಸಿದಂತೆ ಸಿಜಿಎಸ್ ಪೂಲ್ ಲೆಕ್ಕಗಳು, ರಾಜ್ಯ ಪೂಲ್ ಲೆಕ್ಕಗಳು ಮತ್ತು ಆರ್‌ಇ ಪೂಲ್ ಗಳ ಲೆಕ್ಕಗಳ ಸ್ವೀಕೃತಿ ಮತ್ತು ಪಾವತಿಗಳ ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸುವುದು.
8. ಬ್ಯಾಂಕ್ ಗ್ಯಾರಂಟಿಗಳ ಸಿಂಧುತ್ವದ ಉಸ್ತುವಾರಿ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಬ್ಯಾಂಕ್ ಗ್ಯಾರಂಟಿಗಳ ನವೀಕರಣ ಹಾಗೂ ನಗದೀಕರಣಗಳ ವಿಷಯದಲ್ಲಿ ಸಕಾಲದಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವುದು.
9. ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳು ಕಾಲಕಾಲಕ್ಕೆ ಜಾರಿಗೊಳಸುವ ಆದೇಶಗಳಂತೆ, ಕವಿಪ್ರನಿನಿಯ ಪ್ರಸರಣ ಶುಲ್ಕಗಳ/ಎಸ್‌ಎಲ್‌ಡಿಸಿ ಶುಲ್ಕಗಳ/ವಿದ್ಯುತ್ ಸರಬರಾಜು ಕಂಪನಿಗಳ ಹಾಗೂ ಇತರೆ ಧೀರ್ಘಾವಧಿ/ಅಲ್ಪಾವಧಿ ಓಪನ್ ಆಕ್ಸೆಸ್ ಗ್ರಾಹಕರಿಂದ ಪ್ರೋತ್ಸಾಹ ಧನಗಳ/ ಬಿಲ್ಲಿಂಗ್ ಮತ್ತು ಸಂಗ್ರಹಣೆಯ ವಿಷಯಗಳಲ್ಲಿ ಜವಾಬ್ದಾರಿಯನ್ನು ವಹಿಸಿದೆ.

10. ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳ ನಿಯಮಾವಳಿಗಳಂತೆ/ ಕಾಲಕಾಲಕ್ಕೆ ಜಾರಿಗೊಳಿಸುವ ಆದೇಶಗಳಂತೆ, ಡಿಎಸ್‌ಎಂ ಶುಲ್ಕಗಳ ಬಿಲ್ಲಿಂಗ್ ಮತ್ತು ಸಂಗ್ರಹಣೆಯ ವಿಷಯಗಳಲ್ಲಿ ಜವಾಬ್ದಾರಿಯನ್ನು ವಹಿಸಿದೆ.
11. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಸಿಬ್ಬಂದಿ ವೇತನ, ಭತ್ಯೆಗಳು, ರಜೆಯ ಲೆಕ್ಕಗಳು ಮತ್ತು ಇತರೆ ಎಲ್ಲಾ ಸಿಬ್ಬಂದಿ ವಿಷಯಗಳಲ್ಲಿ ಜವಾಬ್ದಾರಿಯನ್ನು ವಹಿಸಿದೆ.
12. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಮಾಸಿಕ ತಾಳೆ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ವಾರ್ಷಿಕ ಲೆಕ್ಕ ಪತ್ರಗಳನ್ನು ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿರುವುದು.
13. ಸಕಾಲದಲ್ಲಿ ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಹಣಕಾಸು ಮತ್ತು ಲೆಕ್ಕಗಳ ವಿಷಯದಲ್ಲಿನ ಅಂಕಿ ಅಂಶಗಳ ಮಾಹಿತಿಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ನಿಗದಿತ ಸಮಯದೊಳಗೆ ಸಲ್ಲಿಸುವುದು.
14. ಕಾಲಕಾಲಕ್ಕೆ ಹೊರಡಿಸಲ್ಪಡುವ ಟ್ಯಾರೀಫ್ ಆದೇಶಗಳು, ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳ ನಿಯಮಾವಳಿಗಳು ಮತ್ತು ಮಾನ್ಯ ನ್ಯಾಯಾಲಯಗಳ ಆದೇಶಗಳನ್ನು ಅನುಷ್ಠಾನಗೊಳಿಸುವ ವಿಷಯಗಳಲ್ಲಿ ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರು ಮುಖ್ಯ ಇಂಜಿನಿಯರ್(ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ ರವರೊಂದಿಗೆ ಜಂಟಿಯಾಗಿ ಜವಾಬ್ದಾರರಾಗಿರುತ್ತಾರೆ.
15. ನಿಗಮವು ಕಾಲಕಾಲಕ್ಕೆ ವಹಿಸುವ ಕೆಲಸಗಳನ್ನು ನಿರ್ವಹಿಸತಕ್ಕದ್ದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

<u>ನಿಗಮ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ೭ಎ/259/1998-99 ದಿನಾಂಕ: 15 MAR 2022 ರ ಅನುಬಂಧ.</u>

**<u>2. ಲೆಕ್ಕ ನಿಯಂತ್ರಣಾಧಿಕಾರಿ(ಎಸ್‌ಎಲ್‌ಡಿಸಿ) ರವರಿಗೆ ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳು:</u>**

ಲೆಕ್ಕ ನಿಯಂತ್ರಣಾಧಿಕಾರಿ(ಟಿಬಿಸಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ಬೆಂಗಳೂರು ಹುದ್ದೆಗೆ ನಿಗಮವು ಈ ಹಿಂದೆ ವಹಿಸಿದ್ದ/ನಿರ್ವಹಿಸುತ್ತಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳೊಂದಿಗೆ **<u>ಈ ಕೆಳಕಂಡ ಅಧಿಕ ಕಾರ್ಯಗಳನ್ನು</u>** ನಿರ್ವಹಿಸಲು ಆದೇಶಿಸಿದೆ:

1. ಆರ್ಥಿಕ ಸಲಹೆಗಾರರು(ಎಸ್‌ಎಲ್‌ಡಿಸಿ) ರವರಿಗೆ ನಿಗಮವು ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ, ಲೆಕ್ಕ ನಿಯಂತ್ರಣಾಧಿಕಾರಿ(ಎಸ್‌ಎಲ್‌ಡಿಸಿ) ರವರು ಸಹಕರಿಸಲು ಸೂಚಿಸಿದೆ.
2. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಲೆಕ್ಕಗಳು, ಸಿಬ್ಬಂದಿ ವಿಷಯಗಳು, ಸಿಬ್ಬಂದಿ ವೇತನ, ರಜೆಯ ಲೆಕ್ಕಗಳು ಹಾಗೂ ಸಕಾಲದಲ್ಲಿ ತಾಳೆ ಪಟ್ಟಿಗಳನ್ನು ಮತ್ತು ವಾರ್ಷಿಕ ಲೆಕ್ಕಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವ ವಿಷಯಗಳಲ್ಲಿ ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸುವುದು.
3. ನಿಗಮವು ಕಾಲಕಾಲಕ್ಕೆ ವಹಿಸುವ ಕೆಲಸಗಳನ್ನು ನಿರ್ವಹಿಸತಕ್ಕದ್ದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**